## ದಿನಾಂಕ 06-08-2022 ರಂದು ಬೆಳಗ್ಗೆ 12.00 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ : 06-08-2022 ರಂದು ಬೆಳಗ್ಗೆ 12:00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

### ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು

| | | | |
|---|---|---|---|
| 1. | ಶ್ರೀಮತಿ.ಸಾವಿತ್ರಿ | – | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88 |
| 2. | ಶ್ರೀಮತಿ.ಶಿಲ್ಪಶ್ರೀ | – | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ |
| 3. | ಶ್ರೀ.ರಾಘವೇಂದ್ರ | – | ಹಿರಿಯ ಘನತ್ಯಾಜ್ಯ ಪರಿವೀಕ್ಷಕರು |
| 4. | ಶ್ರೀ.ಹನುಮಂತಪ್ಪ | – | ಕಿರಿಯ ಘನತ್ಯಾಜ್ಯ ಪರಿವೀಕ್ಷಕರು |
| 5. | ಶ್ರೀ.ಸಂತೋಷ್ | – | ಸ.ಅ, ಬೆಸ್ಕಾಂ |
| 6. | ಶ್ರೀ. ಶ್ರೀ.ಲೋಹಿತ್ | – | ಎಇ, ಬಿಡಬ್ಲ್ಯೂಎಸ್‌ಎಸ್‌ಬಿ |
| 7. | ಶ್ರೀಮತಿ ಮಮತಾ | – | ಎಇ, ಬಿಡಬ್ಲ್ಯೂಎಸ್‌ಎಸ್‌ಬಿ |
| 8. | ಶ್ರೀ.ಲಾಲ್ ಸಾಹೇಬ್ | – | ಮಾರ್ಷಲ್, ಬಿಬಿಎಂಪಿ |
| 9. | ಶ್ರೀ.ಚಂದ್ರ | – | ಸದಸ್ಯರು |
| 10. | ಶ್ರೀ.ನವೀನ್ | – | ಸದಸ್ಯರು |
| 11. | ಶ್ರೀ.ಮಧು | – | ಸದಸ್ಯರು |
| 12. | ಶ್ರೀ.ಸದಾಶಿವನ್ | – | ಸದಸ್ಯರು |
| 13. | ಶ್ರೀ.ಶ್ರೀನಿವಾಸ್ | – | ಸದಸ್ಯರು |
| 14. | ಶ್ರೀ.ಜಗನ್ನಾಥ್ | – | ಸದಸ್ಯರು |

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ.ಶ್ರೀಲ್ಪಶ್ರೀ ರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಹಿಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- 8ನೇ ಅಡ್ಡರಸ್ತೆ, 13ನೇ ಮುಖ್ಯರಸ್ತೆ ಕೊನೆಯಲ್ಲಿರುವ ಖಾಲಿ ಜಾಗವನ್ನು ಸ್ವಚ್ಛಮಾಡಿಕೊಡಬೇಕೆಂದು ಶ್ರೀ.ಬಾಲಚಂದ್ರ ರವರು ಕೋರಿದ್ದು, ಇದಕ್ಕೆ ನೋಡಲ್ ಅಧಿಕಾರಿಯವರು ಸಿಲ್ಟ್ & ಟ್ರಾಕ್ಟರ್ ಮುಖೇನ ಒಂದು ದಿನ ಸಮೂಹಿಕ ಸ್ವಚ್ಛವನ್ನು ಮಾಡಿಕೊಡಬೇಕೆಂದು ವಾರ್ಡ್ ಸಭೆಯಲ್ಲಿ ತಿಳಿಸಿದರು.

- 12ನೇ ಮುಖ್ಯರಸ್ತೆಯಲ್ಲಿ ಪಾದಚಾರಿ ರಸ್ತೆ ಹಾಗೂ ಶೋಲ್ಡರ್ ಡ್ರೈನ್‌ಗಳನ್ನು ಸರಿಪಡಿಸಿಕೊಳ್ಳಬೇಕೆಂದು ಸಭೆಯಲ್ಲಿ ನೆರೆದಿದ್ದ ಶ್ರೀಮತಿ.ದೀಪಾ ರವರು ತಿಳಿಸಿದರು. ಇದಕ್ಕೆ ಸಂಬಂಧಪಟ್ಟಂತೆ ರಸ್ತೆ ಮೂಲಭೂತ ಸೌಕರ್ಯ, ಬಿಬಿಎಂಪಿ ಇಲಾಖೆ ರವರಿಗೆ ತಿಳಿಯಪಡಿಸಲು ಸಭೆಯಲ್ಲಿ ನೋಡಲ್ ಅಧಿಕಾರಿರವರು ಸೂಚಿಸಿದರು.

- 2ನೇ ಅಡ್ಡರಸ್ತೆ, 13ನೇ ಬಿ ಮುಖ್ಯರಸ್ತೆ, 14ನೇ ಮುಖ್ಯರಸ್ತೆ ಹಾಗೂ ಇತ್ಯಾದಿ ರಸ್ತೆಗಳನ್ನು ಡಾಂಬರೀಕರಣ ಮಾಡಿಕೊಡಬೇಕೆಂದು ಸಭೆಯಲ್ಲಿ ನೆರೆದಿದ್ದ ಶ್ರೀಮತಿ.ತಾರ ರವರು ಕೋರಿದರು. ಇದಕ್ಕೆ ವಾರ್ಡ್ ಅಭಿಯಂತರರು ಮಳೆ ಮುಗಿದ ಕೂಡಲೇ ಉಳಿದ ರಸ್ತೆಗಳನ್ನು ಡಾಂಬರೀಕರಣ ಮಾಡಿಕೊಡಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿರುವ ರಸ್ತೆಬದಿಯಲ್ಲಿ ನೇತಾಡುತ್ತಿರುವ ಓ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸುವ ಬದಲು ಅವುಗಳನ್ನು ಸರಿಯಾದ ರೀತಿಯಲ್ಲಿ ದಾರದಿಂದ ಕಟ್ಟಿಹಾಕುವಂತೆ ನೋಡಲ್ ಅಧಿಕಾರಿಗಳು ತಿಳಿಸಿದರು.

- ಸೊಳ್ಳೆಗಳು ಹೆಚ್ಚಾಗಿರುವ ಹಿನ್ನಲೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.

- ಬೆಸ್ಕಾಂ ವತಿಯಿಂದ ಮರಗಳನ್ನು ಟ್ರಿಮ್ಮಿಂಗ್ ಮಾಡಲಾದ ಮರದ ರೆಂಬೆ / ಕೊಂಬೆಗಳನ್ನು ತೆರವುಗೊಳಿಸಿಕೊಡಲು ಸಭೆಯಲ್ಲಿ ನೆರೆದಿದ್ದ ಶ್ರೀ.ನವೀನ್‌ರವರು ಕೋರಿದರು. ಇದನ್ನು ತೆರವುಗೊಳಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ತಿಳಿಸಲಾಯಿತು.

- ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಸ್ಕೈವಾಕ್‌ನ್ನು ನಿರ್ಮಿಸಿಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಪ್ರಕಾಶ್ ರವರು ಕೋರಿದರು. ಇದಕ್ಕೆ ಅವಶ್ಯ ಕ್ರಮ ಕೈಗೊಳ್ಳಲಾವುಗುದೆಂದು ನೋಡಲ್ ಅಧಿಕಾರಿಯವರು ಸೂಚಿಸಿದರು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-88

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 88
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 88